


### ಮಾಹಿತಿಪೂರ್ಣ ಲೇಖನ

'ನಕ್ಷತ್ರ ಲೋಕದಲ್ಲಿ ಎಷ್ಟೊಂದು ಪೃಥ್ವಿಗಳು' ('ಸುಧಾ' ಆ. 28) ನಾಗೇಶ್ ಹೆಗಡೆ ಅವರ ಮುಖಪುಟ ಲೇಖನ ಮಾಹಿತಿ ಪೂರ್ಣವಾಗಿದೆ. ನಕ್ಷತ್ರ ಲೋಕದ ವಿಸ್ಮಯದ ಬಗ್ಗೆ ತಿಳಿಸುವುದರ ಜೊತೆಗೆ, ಆ ವಿಸ್ಮಯದ ಅಸ್ಮಿತೆಯ ಜವಾಬ್ದಾರಿಯ ಬಗ್ಗೆಯೂ ಪ್ರಸ್ತುತ ಲೇಖನ ಬೆಳಕು ಚೆಲ್ಲಿದೆ.

-ಎಂ.ಜಿ. ರಾಮಚಂದ್ರ, ಮಂಡಗಳಲೆ, ಶಿವಮೊಗ್ಗ, ತೇಜಸ್ ಹೆಬ್ಬಾರ್, ಕೊಕ್ಕಡ, ಎಚ್.ಆರ್. ದೇಸಾಯಿ, ರಾಯಚೂರು, ಮಹಾವೀರ ಕಾಸರ, ಶಿವಮೊಗ್ಗ, ದಿಶಾ, ಉಜಿರೆ

### ಅದ್ಭುತ ಲೇಖನ

ನಾಗೇಶ ಹೆಗಡೆಯವರ ಸಂಶೋಧನಾತ್ಮಕ ಲೇಖನ ಓದಿದಾಗ ನಾವೆಷ್ಟು ಕುಬ್ಜರು ಅನಿಸುವುದು ಸಹಜ. ಅದ್ಭುತ ವೈಜ್ಞಾನಿಕ ಲೇಖನ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ವಿಚಾರಲಹರಿ

ವಿಚಾರಲಹರಿಯಲ್ಲಿ ಮೂಚಿ ಅವರು ಬರೆದ 'ನಮ್ಮ ಭಾರತ' ಚೆನ್ನಾಗಿದೆ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಸಕಾಲಿಕ ಲೇಖನ

ಎಲ್ಲಿ ಭಾರತಕ್ಕೆ 'ಎಬೋಲಾ' ರೋಗ ಬಂದು ಬಿಡುತ್ತೋ, ಇನ್ನು ಎಷ್ಟು ಜನ ಅದರಿಂದಾಗಿ ಸಾಯಬೇಕೋ ಎಂದು ಚಿಂತಿಸುತ್ತಿರುವಾಗಲೇ, 'ಸುಧಾ'ದಲ್ಲಿ 'ಎಬೋಲಾ- ಆತಂಕ ಬೇಡ' ಎಂಬ ಆರೋಗ್ಯ ಲೇಖನ (ಡಾ.ಅನುರೂಪ ಎಂ.ಎಸ್.) ಸಮಾಧಾನ ತಂದಿತು. ಈ ಲೇಖನ ಸಕಾಲಿಕ. ಓದುಗನಿಗೆ ಈ ರೋಗದ ಬಗ್ಗೆ ಹಲವಾರು ಉಪಯುಕ್ತ ಮಾಹಿತಿ ನೀಡಿದ್ದಲ್ಲದೆ ಭಾರತಕ್ಕೆ ಈ ರೋಗ ಬರುವ ಸಾಧ್ಯತೆ ಇಲ್ಲವೆಂಬ 'ಅಭಯ' ನೀಡಿದೆ.

-ನಾರಾಯಣ ಯಾಜಿ, ಶಿರಾಲಿ, ಅಶ್ವಿತಾ, ಉಜಿರೆ

### ಆತಂಕ ಕಡಿಮೆಯಾಯಿತು

'ಎಬೋಲಾ-ಆತಂಕ ಬೇಡ' ಲೇಖನ ಸಂಪೂರ್ಣ ಮಾಹಿತಿ ನೀಡಿದ್ದು ಉಪಯುಕ್ತವಾಗಿತ್ತು. ಹೆಚ್ಚಿದ್ದ ಆತಂಕ ಕಡಿಮೆ ಆಯಿತು.

-ಸಿಂಚನಾ ಬಿ.ಎಸ್., ಉಜಿರೆ

### ಸಜ್ಜಾಗಿದೆಯೆ?

ಆತಂಕ ಬೇಡ ಸರಿ. ಆದರೆ ರೋಗ ತಡೆಯುವಲ್ಲಿ ನಮ್ಮ ದೇಶ ಎಷ್ಟರಮಟ್ಟಿಗೆ ಸಜ್ಜಾಗಿದೆ?

-ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

### ಮುದ ನೀಡಿದೆ

ಭೌತಿಕ ಸಿರಿಯ ಬೆಂಬತ್ತಿ (ನಂದಾ ಕೇಶವ ಜಹಗೀರದಾರ) ಕಥೆ ಯುವ ಜನಾಂಗಕ್ಕೆ ಮಾರ್ಗದರ್ಶಿಯಾಗಿದೆ. ಕಥಾವಸ್ತು ಪೂರಕವಾದ ಸಂಗತಿಯನ್ನೊಳಗೊಂಡು ಓದುಗರಿಗೆ ಮುದ ನೀಡುತ್ತದೆ.

ಮಂಜುನಾಥ ನಾಯ್ಕ ಅವರ 'ಕತ್ತಲೆ' ಮಿನಿ ಕಥೆ ಪಾತ್ರ ಪೋಷಣೆಯಿಲ್ಲದೆ ಸೊರಗಿದೆ. ಕಥೆ ಪೂರಾ ಕತ್ತಲಾಗಿದೆ.

-ಎನ್.ಎಸ್. ಆನಂದ್, ಬೆಂಗಳೂರು

### ಸುಭಿಕ್ಷವಾದ ಪ್ರಜಾಪ್ರಭುತ್ವ!

ಮಂಜುನಾಥ ನಾಯ್ಕ ಅವರ ಮಿನಿ ಕಥೆ ಓದಿದಾಗ ಅನಿಸಿದ್ದು ಇಷ್ಟು. ರಾಜ್ಯದಲ್ಲಿ ಒಂದು ರೂಪಾಯಿಗೆ ಕೆ.ಜಿ. ಅಕ್ಕಿ ಸಿಕ್ಕುತ್ತಿರುವಾಗ ಅನ್ನ ಕದಿಯುವ ದಾರಿದ್ರ್ಯವೆ?

-ರಾಜಶೇಖರ ಹಾದಿಮನಿ, ಧಾರವಾಡ

### ಮಕ್ಕಳ ಕಥೆ ಚೆನ್ನಾಗಿದೆ

'ಎಳೆಯರ ಅಂಗಳ'ದಲ್ಲಿ ಗಣಪತಿ ಬಾಳೆಗದ್ದೆ ಅವರ ಸಂಗ್ರಹ ಕಥೆ 'ಬಾಲ ಕಳೆದುಕೊಂಡ ಮನುಷ್ಯರು' ತುಂಬಾ ಚೆನ್ನಾಗಿದೆ.

- ಮಹೇಶ್ ಸಣ್ಣಗಿರಿ, ಕೂಡ್ಲಿಗಿ

### ಎಳೆಯರ ಕಥೆ ಚೆನ್ನಾಗಿದೆ

ಪ್ರತಿ ವಾರ ಪ್ರಕಟವಾಗುವ 'ಎಳೆಯರ ಅಂಗಳ' ಸಣ್ಣ ಕಥೆ ಹಾಗೂ ಪದ್ಯಗಳು ಚೆನ್ನಾಗಿರುತ್ತವೆ. ನನ್ನ ಮೊಮ್ಮಗನಿಗಂತೂ ಅತೀ ರಂಜನೆ ಒದಗಿಸುತ್ತಿದೆ.

-ಎಸ್. ವಸಂತಾ ಆನಂದ್, ಬೆಂಗಳೂರು

### ಕುತೂಹಲಕಾರಿ ಲೇಖನ

'ತೆಂಗಿನ ಕೊಯ್ಲಿಗೆ ಕೋತಿ ಪಡೆ' (ಆಗಸ್ಟ್ 21) ಡಾ. ಅರುಣ್ ಇಸ್ಲೂರು ಲೇಖನ ಕುತೂಹಲಭರಿತವಾಗಿತ್ತು. ಭಾರತದಲ್ಲೂ ಈ ವ್ಯವಸ್ಥೆ ಉಪಯುಕ್ತವಾಗಬಹುದು. ಕಾರ್ಮಿಕರ ಕೊರತೆ ಹಾಗೂ ಕೋತಿಗಳಿಂದ ಹಾನಿಯಾಗುವುದನ್ನು ತಡೆಗಟ್ಟಬಹುದೇನೋ.

-ಸುವರ್ಚಲಾ ಅಂಬೇಕರ್, ಶೃಂಗೇರಿ, ಶ್ರೀಮತಿ ಜಿ. ಉಜಿರೆ, ಕಾವ್ಯ, ಕಲ್ಮಂಜ

### ಮನೆ ಮದ್ದು ಶ್ರಾವಣ ಕದಿರು

ಶ್ರಾವಣ ಕದಿರು (ಆ. 21) ಪ್ರಮೋದ್ ಹರಿಕಾಂತ ಅವರ ಲೇಖನ ಮಾಹಿತಿಯುಕ್ತವಾಗಿದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ಗಿಡ ಮೂಲಿಕೆಗಳ ಪರಿಚಯವಾಗಲೀ ಅಥವಾ ಅದರ ಉಪಯೋಗವಾಗಲಿ ಗೊತ್ತಿಲ್ಲದಿರುವುದು ನಮ್ಮ ದೊಡ್ಡ ದುರಂತವೇ ಸರಿ. 'ಸುಧಾ' ವಾರಪತ್ರಿಕೆಯು ನಮ್ಮ ಮನೆಯ ಅಂಗಳದಲ್ಲಿ ಮಳೆಗಾಲದಲ್ಲಿ ಬೆಳೆಯುವ ಜರಿ ಸಸ್ಯದ ಬಗ್ಗೆ ಮಾಹಿತಿಯನ್ನು ನೀಡಿತು. ಇದಕ್ಕಿಂತ ಮುಂಚೆ ನನಗೆ ಅದು 'ಶ್ರಾವಣ ಕದಿರು' ಎಂಬ ವಿಚಾರವೇ ತಿಳಿದಿರಲಿಲ್ಲ.

-ಪವಿತ್ರ, ಸುಶ್ಮಿತಾ ಉಜಿರೆ

### ನಮ್ಮ 'ಸುಧಾ'

*ಬರುವಳು ಸುಧಾ, ಕೊಡುವಳು ಮುದ*
*ಇವಳಿಂದಲೇ ಗುರುವಾರ,*
*ಹೆಸರಾಯಿತು ಸುಧಾ ವಾರ!*
*ಜ್ಞಾನ ವಿಜ್ಞಾನ ಕಥೆ ಕವನ ರಸದೌತಣ*
*ವಾರ ವಾರವೂ ನಿತ್ಯವಿನೂತನ*
*ಹೃದಯ ಮನೋಹರ ಚಿರ ಯೌವ್ವನೆ ಸುಧಾ*
*ಕನ್ನಡ ಜ್ಯೋತಿಯ ಬೆಳಗಲಿ ಸದಾ*
*ಸುಧಾ ನಮ್ಮೊಡನಿರಲಿ ಸದಾ, ಸದಾ...*

-ಎಲ್. ಸುಮಂತ್, ಬೆಂಗಳೂರು

### 'ಸುಧಾ' ವಿಶ್ವಕೋಶವಿದ್ದಂತೆ

ಐವತ್ತರ (ಸುವರ್ಣ) ಸಂಭ್ರಮ ಆಚರಿಸುತ್ತಿರುವ 'ಸುಧಾ' ಪತ್ರಿಕೆಗೆ ಶುಭಾಶಯಗಳು.

'ಸುಧಾ'ವನ್ನು ಒಮ್ಮೆ ತೆರೆದರೆ ಎಲ್ಲಾ ಓದದೆ ಬದಿಗಿಡಲು ಮನಸ್ಸಾಗುವುದಿಲ್ಲ ಈ ಪುಟ್ಟ ಪತ್ರಿಕೆಯಲ್ಲಿ ಏನಿದೆ? ಎನ್ನುವುದಕ್ಕಿಂತ ಏನಿಲ್ಲ ಎಂದು ಪ್ರಶ್ನಿಸುವುದು ಸರಿ ಎನಿಸುತ್ತಿದೆ. ಮುಖಪುಟದಿಂದ ಹಿಡಿದು ಕೊನೆ ತನಕ ಕಡೆ ಪಕ್ಕ ಎರಡೆರಡು ಬಾರಿ ನೋಡುವ ಮನಸ್ಸಾಗುತ್ತದೆ. ಕೀಟಲೋಕ ಇರಬಹುದು, ಕೀಟಲೆ ಕಾಮಿಕ್ಸ್ ಇರಬಹುದು, ಎಳೆಯರ ಅಂಗಳ, ವೈದ್ಯ ಆರೋಗ್ಯ, ಫ್ಯಾಷನ್, ಪ್ರವಾಸ, ಕ್ರೀಡೆ, ಕಥೆ, ಆಹಾರ, ಭವಿಷ್ಯ, ಸಿನಿಮಾ ಎಲ್ಲವನ್ನು ಅಚ್ಚುಕಟ್ಟಾಗಿ ಪೋಣಿಸಿದಂತಿದೆ.

-ಪುರಂದರ ಬಲ್ಯಾಯ, ಪುದು(ದ.ಕ.)

### ಕಾದಂಬರಿ ಚೆನ್ನಾಗಿ ಬರುತ್ತಿದೆ



ಇತ್ತೀಚಿನ ಸಂಚಿಕೆಯಲ್ಲಿ ಗೀತಾ ನಾಗಭೂಷಣ ಅವರ 'ಗುಳೆ' ಎಂಬ ಕಾದಂಬರಿ ಚೆನ್ನಾಗಿ ಮೂಡಿ ಬರುತ್ತಿದೆ. ಅದಕ್ಕಿಂತಲೂ ಖುಷಿ ಎಂದರೆ ಹೈದರಾಬಾದ್ ಕರ್ನಾಟಕ ಭಾಷೆಯನ್ನು ಬಳಸಿಕೊಂಡಿರುವುದು.

-ವಾಣಿ ಜಿ., ಉಜಿರೆ

### ಕುತೂಹಲಕಾರಿ

ಧಾರಾವಾಹಿ ಕುತೂಹಲಕಾರಿಯಾಗಿ ಸಂಚಿಕೆಯಿಂದ ಸಂಚಿಕೆಗೆ ಓದುಗರನ್ನು ಸೆಳೆಯುತ್ತಿದೆ. ಸಹಜ ಪಾತ್ರ ಜೋಡಣೆಯಿಂದ ಧಾರಾವಾಹಿ ಮನೆ ಮಂದಿಗೆಲ್ಲಾ ಪ್ರಿಯವಾಗಿದೆ. ಪ್ರಕಟಿಸುತ್ತಿರುವ 'ಸುಧಾ'ಗೆ ಧನ್ಯವಾದಗಳು. ಲೇಖಕಿಯ ಶ್ರಮ ಸಾರ್ಥಕ.

-ಆನಂದ್ ಸುಬ್ಬರಾವ್, ನೆಲಮಂಗಲ